# ಹವ್ಯಾಸವೇ ವೃತ್ತಿಯಾದಾಗ..



ಪ್ಯಾರಿಸ್‌ನಿಂದ ಬಂದ ಫ್ರಾಂಕ್ ಬರ್ಟೋಲೆಮಿ

ಕೆಲವರಿಗೆ ಚಿತ್ರ ಬರೆಯುವುದು ಹವ್ಯಾಸವಾದರೆ ಇನ್ನು ಕೆಲವರಿಗೆ ಚಂದದ ಚಿತ್ರಕಲೆಯನ್ನು ಸಂಗ್ರಹಿಸುವ ಅಭ್ಯಾಸ. ಮತ್ತೂ ಕೆಲವರು ಚಿತ್ರಕಲೆಗಳನ್ನು ಖರೀದಿಸಿ ಮಾರಾಟ ಮಾಡಿಯೋ, ಗ್ಯಾಲರಿಗಳಲ್ಲಿ ಪ್ರದರ್ಶನ ಏರ್ಪಡಿಸಿಯೋ ತಮ್ಮ ಕಲಾಭಿಮಾನವನ್ನು ಅಭಿವ್ಯಕ್ತಿಸುತ್ತಾರೆ.

ಪ್ಯಾರಿಸ್‌ನಿಂದ ಬೆಂಗಳೂರಿಗೆ ಸುಮಾರು ಹನ್ನೊಂದು ವರ್ಷಗಳ ಹಿಂದೆ ಬಂದ ಫ್ರಾಂಕ್ ಬರ್ಟೋಲೆಮಿ ಅವರಿಗೆ ಚಿತ್ರಕಲೆಗಳನ್ನು ಕೊಂಡು ದೇಶ ವಿದೇಶಗಳಲ್ಲಿ ಅದನ್ನು ಪ್ರಚಾರ ಮಾಡುವ ಹವ್ಯಾಸವಿತ್ತು. ಖಾಸಗಿ ಕಂಪೆನಿಯೊಂದರಲ್ಲಿ ಉದ್ಯೋಗಿಯಾಗಿದ್ದ ಫ್ರಾಂಕ್ 'ಆರ್ಟ್ ಕಲೆಕ್ಟರ್ ಅಂಡ್ ಡೀಲರ್' ಆಗಿ ಬೆಳೆಸಿಕೊಂಡಿದ್ದ ಹವ್ಯಾಸವನ್ನು ಈಗ ವೃತ್ತಿ ಮಾಡಿಕೊಂಡಿದ್ದಾರೆ. ಚಿತ್ರಕಲಾವಿದರಿಂದ ಚಿತ್ರಕಲೆಯನ್ನು ಖರೀದಿಸಿ ಅದನ್ನು ವಿದೇಶವೂ ಸೇರಿದಂತೆ ಹಲವೆಡೆ ಮಾರಾಟ ಮಾಡುವುದು ಇದೀಗ ಇವರ ಖಾಯಂ ವೃತ್ತಿ.

ಕೆಲಸದ ನಿಮಿತ್ತ ಹೆಚ್ಚಾಗಿ ಪ್ರವಾಸದಲ್ಲೇ ಇರುವ ಫ್ರಾಂಕ್, ಬೆಂಗಳೂರನ್ನು ಬಹಳ ಇಷ್ಟಪಡುತ್ತಾರೆ. ಹೀಗಾಗಿ ಎಲ್ಲೇ ಹೋದರೂ ಹೆಚ್ಚು ದಿನ ಉಳಿಯದೆ ವಾಪಸ್ ಬರುತ್ತಾರೆ. ಆದರೂ ಪ್ರತಿ ಮೂರು ತಿಂಗಳಿಗೊಮ್ಮೆ ಹೋಮ್‌ಟೌನ್ ಆದ ಪ್ಯಾರಿಸ್‌ಗೆ ಹೋಗಿ ಬರುತ್ತಾರೆ. ಕೆಲಸದ ಸಂಬಂಧ ಕೊಲಂಬೊ, ಢಾಕಾ, ಕಠ್ಮಂಡು, ಕಾಬೂಲ್‌ಗಳಿಗೆ ಹೆಚ್ಚಾಗಿ ಪ್ರವಾಸ ಹೋಗುತ್ತಲೇ ಇರುತ್ತಾರೆ.

1993ರಲ್ಲಿ ಫ್ರಾಂಕ್ ಮೊದಲು ಮುಂಬಯಿಗೆ ಬಂದು ಕೆಲ ವರ್ಷ ಅಲ್ಲಿ ನೆಲೆಸಿ ಫ್ರೆಂಚ್ ರಾಯಭಾರ ಕಚೇರಿಯಲ್ಲಿ ಟ್ರೇಡ್ ಕಮಿಷನರ್ ಆಗಿ ಕೆಲಸ ಮಾಡಿದವರು. ಆದರೆ ಆ ಕೆಲಸ ಯಾಕೊ ಇಷ್ಟವಾಗದೆ ಮರಳಿ ಪ್ಯಾರಿಸ್‌ಗೇ ಹೋದರು. ಅದಾಗಿ ಕೆಲ ವರ್ಷಗಳ ಬಳಿಕ ಬೆಂಗಳೂರಿಗೆ ಬಂದು ಬ್ರಿಟಿಷ್ ಪೆಟ್ರೋಲಿಯಂ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದರು.

ಬೆಂಗಳೂರಿಗೆ ಬಂದ ಮೊದ ಮೊದಲು ಅವರಿಗೆ ಈ ನಗರ ಇಷ್ಟವಾಗುತ್ತಿರಲಿಲ್ಲವಂತೆ. ಹೀಗಾಗಿ ಪ್ರತಿ ವಾರಾಂತ್ಯದಲ್ಲಿ ಮುಂಬಯಿಗೆ ಹೋಗುತ್ತಿದ್ದರು. ಅಲ್ಲಿ ಇವರ ಮಿತ್ರರೊಬ್ಬರು ಬೆಂಗಳೂರಿನಲ್ಲಿರುವ ಕೆಲವು ಸ್ನೇಹಿತರನ್ನು ಪರಿಚಯ ಮಾಡಿಕೊಟ್ಟರು. ಆಮೇಲೆ ಫ್ರಾಂಕ್ ವಾರಾಂತ್ಯದಲ್ಲಿ ಮುಂಬಯಿಗೆ ಹೋಗುವುದನ್ನು ಬಿಟ್ಟು ನಗರದಲ್ಲೇ ಉಳಿಯತೊಡಗಿದರು.

'2008ರಲ್ಲಿ ಭಾರತದಲ್ಲಿ ಹಣದುಬ್ಬರ ಸಮಸ್ಯೆ ಉಂಟಾಯಿತು. ಆಗ ಮರಳಿ ಪ್ಯಾರಿಸ್‌ಗೆ ಹೋಗುವ ಯೋಚನೆ ಮಾಡಿದೆ. ಪ್ಯಾರಿಸ್‌ನ ನನ್ನ ಅನೇಕ ಗೆಳೆಯರು ಆಗ ಬೆಂಗಳೂರಿನಲ್ಲಿದ್ದರು. ಅವರೆಲ್ಲರೂ ವಾಪಸ್ ಹೋದರು. ಆದರೆ ನಾನು ಹೋಗಲಿಲ್ಲ. ಚಿತ್ರಕಲೆಯ ಬಗ್ಗೆ ಬಹಳ ಆಸಕ್ತಿ ಇರುವ ನನಗೆ ಅದನ್ನು ಕಲಾವಿದರಿಂದ ಕೊಂಡುಕೊಳ್ಳುವ ಆಸಕ್ತಿ. ಮುಂಬಯಿಯಲ್ಲಿ ನನ್ನ ಗೆಳೆಯ ಆರ್ಟ್ ವರ್ಕ್ ಅನ್ನು ಕೊಂಡು ಮಾರಾಟ ಮಾಡುವ ಕೆಲಸ ಮಾಡುತ್ತಿದ್ದ. ಅಲ್ಲಿಂದ ನಾನೂ 'ಆರ್ಟ್ ಡೀಲರ್' ಆಗಿ ಕೆಲಸ ಮಾಡಲಾರಂಭಿಸಿದೆ. ಚಿತ್ರಕಲಾ ಪ್ರದರ್ಶನ, ಮ್ಯೂಸಿಯಂ, ಗ್ಯಾಲರಿಗಳಿಗೆ ಅಡ್ಡಾಡಿ ಆರ್ಟ್ ವರ್ಕ್‌ಗಳನ್ನು ನೋಡಿ ಅಲ್ಲಿಂದ ಖರೀದಿಸತೊಡಗಿದೆ. ಈಗ ಕಂಪೆನಿ ಕೆಲಸ ಬಿಟ್ಟು 'ಆರ್ಟ್ ಡೀಲರ್' ಆಗಿಯೇ ಕೆಲಸ ಮಾಡುತ್ತಿದ್ದೇನೆ' ಎನ್ನುತ್ತಾರೆ ಫ್ರಾಂಕ್.

'ಪ್ಯಾರಿಸ್‌ನಿಂದಲೂ ಕೆಲವು ಕಲಾವಿದರ ಆರ್ಟ್ ವರ್ಕ್ ಅನ್ನು ಖರೀದಿಸಿ ಅದನ್ನು ಇಲ್ಲಿಗೆ ತಂದೆ. ಇಲ್ಲಿಯ ಕಲಾವಿದರ ಚಿತ್ರಕಲೆಯನ್ನು ಪ್ಯಾರಿಸ್ ಸೇರಿದಂತೆ ವಿಶ್ವದ ನಾನಾ ದೇಶಗಳಲ್ಲಿ ಆಸಕ್ತರಿಗೆ ಕೊಟ್ಟಿದ್ದೇನೆ. ಎಲ್ಲ ದೇಶಗಳಲ್ಲೂ ಇಲ್ಲಿನ ಕಲಾವಿದರ ಚಿತ್ರಕಲೆಯನ್ನು ಬಹಳ ಇಷ್ಟಪಡುತ್ತಾರೆ. ಅಲ್ಲಿನ ಜನರಿಗೆ ಭಾರತೀಯರ ಕಲಾ ಪ್ರತಿಭೆ ಬಗ್ಗೆ ಅರಿವಿಲ್ಲ. ದೇಶ ದೇಶಗಳ ನಡುವೆ ಸಾಂಸ್ಕೃತಿಕ ಅಂತರ (ಕಲ್ಚರಲ್ ಗ್ಯಾಪ್) ಬಹಳ ಇದೆ' ಎಂಬುದು ಫ್ರಾಂಕ್ ಅವರ ಅಭಿಪ್ರಾಯ.

'ಭಾರತದಲ್ಲೂ ಕೆಲ ಮಂದಿ ಉತ್ತಮ ಆರ್ಟ್ ಕಲೆಕ್ಟರ್‌ಗಳಿದ್ದಾರೆ. ಇವರೂ ಕೂಡ ಇಲ್ಲಿನ ಕಲಾವಿದರ ಚಿತ್ರಕಲೆಯನ್ನು ವಿದೇಶಗಳಲ್ಲಿ ಪ್ರಚಾರ ಮಾಡುವ ಕೆಲಸದಲ್ಲಿ ತೊಡಗಿದ್ದಾರೆ. ಫರ್ನಾಂಡೊ ಬೊಟೆರೊ ಮತ್ತು ಅನೀಶ್ ಕಪೂರ್ ಉತ್ತಮ ಆರ್ಟ್ ಕಲೆಕ್ಟರ್ ಆಗಿದ್ದಾರೆ' ಎನ್ನುತ್ತಾರೆ ಫ್ರಾಂಕ್.

'ವಾರಾಂತ್ಯದಲ್ಲಿ ಗೆಳೆಯರನ್ನು, ಚಿತ್ರ ಕಲಾವಿದರನ್ನು ಭೇಟಿಯಾಗುತ್ತೇನೆ. ಸಿನಿಮಾ, ಚಿತ್ರಕಲಾ ಪ್ರದರ್ಶನ ವೀಕ್ಷಣೆಯಲ್ಲಿ ಕಾಲ ಕಳೆಯುತ್ತೇನೆ. ಮುಂಬಯಿಯಲ್ಲಿ ಇರುವಾಗ ಹಿಂದಿ ಮಾತನಾಡುವುದು ಕಲಿತಿದ್ದೆ. ಬೆಂಗಳೂರು ಬಂದ ಮೇಲೆ ಹಿಂದೆ ಮರೆತು ಹೋಗಿದೆ. ಇಲ್ಲಿನ ಕನ್ನಡ ಭಾಷೆಯನ್ನೂ ಕಲಿಯಲು ಆಸೆ. ಆದರೆ ಇದು ಬಹಳ ಕಷ್ಟ ಎಂಬ ಭಾವನೆ ಮನಸ್ಸಿನಲ್ಲಿರುವುದರಿಂದ ಕಲಿಯಲು ಹಿಂಜರಿಯುತ್ತಿದ್ದೇನೆ' ಎನ್ನುತ್ತಾರೆ ಅವರು.

'ಇಲ್ಲಿನ ಊಟ ತಿಂಡಿ ತುಂಬ ರುಚಿಯಾಗಿರುತ್ತದೆ. ನನಗೆ ಸಸ್ಯಾಹಾರಿ ತಿಂಡಿ ತಿನಿಸುಗಳೇ ಇಷ್ಟ. ಪಾಲಕ್‌ಪನ್ನೀರ್ ಅನ್ನು ನಾನು ಬಹಳ ಇಷ್ಟಪಡುತ್ತೇನೆ. ಬೆಂಡೆಕಾಯಿ ಫ್ರೈ, ಕೆಂಪಕ್ಕಿ ಅನ್ನ, ಬಿರಿಯಾನಿ ಕೂಡ ಬಹಳ ಇಷ್ಟ ಎನ್ನುವ ಫ್ರಾಂಕ್, ಮಾಂಸಾಹಾರದಲ್ಲಿ ಫಿಶ್ ಫ್ರೈಯನ್ನು ಪ್ರೀತಿಸುತ್ತೇನೆ ಎನ್ನುತ್ತಾರೆ. ರಂಜಾನ್ ಸಮಯದಲ್ಲಿ ಸಿಗುವ ಸಮೋಸಾ ಕೂಡ ಬಹಳ ಇಷ್ಟಪಟ್ಟು ತಿನ್ನುತ್ತೇನೆ' ಎಂದು ಇಲ್ಲಿನ ಆಹಾರ ಪದ್ಧತಿಯ ಬಗ್ಗೆ ವಿವರ ನೀಡುತ್ತಾರೆ ಫ್ರಾಂಕ್.

★ ಅವನೀಶ್